## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | (811) 53 |
| ಸದಸ್ಯರ ಹೆಸರು | : | ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 24.08.2026 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಮಾಜ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳ ಸಂಖ್ಯೆ ಎಷ್ಟು; ಪ್ರಸ್ತುತ ವಸತಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | ಸಮಾಜ ಕಲ್ಯಾಣ ಇಲಾಖೆಯಡಿ 1 ತರಗತಿಯಿಂದ 5 ನೇ ತರಗತಿಯವರೆಗೆ 67 ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ, ಒಟ್ಟು 874 (ಪರಿಶಿಷ್ಟ ಜಾತಿ-540, ಪರಿಶಿಷ್ಟ ವರ್ಗ-155 ಮತ್ತು ಹಿಂದುಳಿದ ವರ್ಗ-179) ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಕೆಲವು ವಸತಿ ಶಾಲೆಗಳಲ್ಲಿ 6 ರಿಂದ 10 ರವರೆಗೆ ಮತ್ತು ಕೆಲವು ವಸತಿ ಶಾಲೆಗಳಲ್ಲಿ 10 ರಿಂದ 12 ನೇ ತರಗತಿಯವರೆಗೆ ಕಾರ್ಯನಿರ್ವಹಿಸುತ್ತಿರುತ್ತವೆ. |
| ಆ) | ಕಳೆದ ಮೂರು ಆರ್ಥಿಕ ವರ್ಷಗಳಲ್ಲಿ ಜುಲೈ 2026 ಅಂತ್ಯದವರೆಗೆ ಸಾಲಿನಲ್ಲಿ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ನೀಡುವ ಶುಚಿತ್ವ ಕಿಟ್‌ಗಳು/ಇತರೆ ಕಿಟ್‌ಗಳು ಸರಿಯಾದ ಸಮಯದಲ್ಲಿ ವಿದ್ಯಾರ್ಥಿಗಳಿಗೆ ತಲುಪದಿರುವ ವಿಷಯ ಸರ್ಕಾರದ ಗಮನಕ್ಕೆ ಇದೆಯೇ; ಇದ್ದಲ್ಲಿ ತೆಗೆದುಕೊಂಡ ಕ್ರಮಗಳೇನು; ವಿಳಂಬಕ್ಕೆ ಕಾರಣಗಳೇನು; ಒಂದು ವೇಳೆ ವಿತರಿಸುವ ಹಂತದಲ್ಲಿದ್ದರೆ ಯಾವ ಸಮಯದಿಂದ ಕಿಟ್‌ಗಳನ್ನು ವಿತರಿಸಲಾಗುತ್ತದೆ; (ತಿಂಗಳವಾರು ಸಂಪೂರ್ಣ | ಕಳೆದ ಮೂರು ಆರ್ಥಿಕ ವರ್ಷಗಳಲ್ಲಿ ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳಿಗೆ ಶುಚಿ ಸಂಭ್ರಮ ಕಿಟ್‌ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಕಲಂ 4(ಜಿ) ರಡಿ ವಿನಾಯಿತಿ ಹೊಂದಿರುವ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಇವರಿಂದ ಖರೀದಿಸಿ ಪೂರೈಸಲಾಗಿರುತ್ತದೆ.<br><br>ಪ್ರಸಕ್ತ ಆರ್ಥಿಕ ವರ್ಷದಲ್ಲಿ ಆದೇಶ ಸಂಖ್ಯೆ: ಸಕಇ 18 ಎಂಡಿಎಸ್ 2026, ದಿನಾಂಕ:23.04.2026 ರನ್ವಯ ದಿನಾಂಕ: 03.07.2026 ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರನ್ವಯ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ತುರ್ತಾಗಿ ಸರಬರಾಜು ಪ್ರಕ್ರಿಯೆ ಪ್ರಾರಂಭಿಸಲಾಗುವುದು.<br><br>ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಕಳೆದ ಮೂರು ವರ್ಷಗಳಲ್ಲಿ ವಸತಿ ಶಾಲೆಯ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ಶುಚಿ ಸಂಭ್ರಮ ಕಿಟ್ ಹಾಗೂ ಸಿರಿಗಂಧದ ಕಿಟ್‌ಗಳನ್ನು ಕೆಟಿಪಿಪಿ ಅಧಿನಿಯಮ 1999ರ ಕಲಂ 4(ಜಿ)ರಡಿ ವಿನಾಯಿತಿ ಹೊಂದಿರುವ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಬೆಂಗಳೂರು ಇವರಿಂದ ನಿಗಧಿತ ಅವಧಿಯಲ್ಲಿ ಸರಬರಾಜು ಪಡೆದು ವಿತರಿಸಲಾಗಿದ್ದು, ಸದರಿ ವರ್ಷಗಳಲ್ಲಿ ಈ ಕೆಳಕಂಡಂತೆ ಅಗತ್ಯ ಕ್ರಮವಹಿಸಲಾಗಿರುತ್ತದೆ. |

| | |
|---|---|
| ಮಾಹಿತಿ ನೀಡುವುದು) | **2023-24ನೇ ಸಾಲು :-**<br><br>ಆದೇಶ ಸಂಖ್ಯೆ: ಸಕನಿ 173 ಪಕವಿ 2023, ದಿನಾಂಕ:02-11-2023ರಲ್ಲಿ, 2023-24ನೇ ಸಾಲಿಗೆ ಇಲಾಖೆಯ ಸರ್ಕಾರಿ ವಸತಿ ಶಾಲೆ ಹಾಗೂ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಶುಚಿ ಸಂಭ್ರಮ ಕಿಟ್ ಹಾಗೂ ಸಿರಿಗಂಧದ ಕಿಟ್‌ಗಳನ್ನು ಕೆಟಿಪಿಪಿ ಅಧಿನಿಯಮ 1999ರ ಕಲಂ 4(ಜಿ)ರಡಿ ವಿನಾಯಿತಿ ಹೊಂದಿರುವ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಬೆಂಗಳೂರು ಇವರಿಂದ ಖರೀದಿಸಲು ಮಂಜೂರಾತಿ ನೀಡಿ ಆದೇಶಿಸಿದ್ದು, KSDL ಸಂಸ್ಥೆಯಿಂದ ಸರಬರಾಜು ಪಡೆಯಲಾಗಿದೆ.<br><br>**2024-25ನೇ ಸಾಲು :-**<br>ಆದೇಶ ಸಂಖ್ಯೆ: ಸಕಇ 75 ಪಕವಿ 2024, ದಿನಾಂಕ:15-03-2024 ರಲ್ಲಿ, 2024-25ನೇ ಸಾಲಿಗೆ ಇಲಾಖೆಯ ಸರ್ಕಾರಿ ವಸತಿ ಶಾಲೆ ಹಾಗೂ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಶುಚಿ ಸಂಭ್ರಮ ಕಿಟ್ ಹಾಗೂ ಸಿರಿಗಂಧದ ಕಿಟ್‌ಗಳನ್ನು ಕೆಟಿಪಿಪಿ ಅಧಿನಿಯಮ 1999ರ ಕಲಂ 4(ಜಿ)ರಡಿ ವಿನಾಯಿತಿ ಹೊಂದಿರುವ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಬೆಂಗಳೂರು ಇವರಿಂದ ಖರೀದಿಸಲು ಮಂಜೂರಾತಿ ನೀಡಿ ಆದೇಶಿಸಿದ್ದು, KSDL ಸಂಸ್ಥೆಯಿಂದ ಸರಬರಾಜು ಪಡೆಯಲಾಗಿದೆ.<br>**2025-26ನೇ ಸಾಲು :-**<br>ಆದೇಶ ಸಂಖ್ಯೆ:ಸಕಇ 86 ಪಕವಿ 2025, ದಿನಾಂಕ:26-05-2025 ರಲ್ಲಿ, 2025-26ನೇ ಸಾಲಿಗೆ ಇಲಾಖೆಯ ಸರ್ಕಾರಿ ವಸತಿ ಶಾಲೆ ಹಾಗೂ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಶುಚಿ ಸಂಭ್ರಮ ಕಿಟ್ ಹಾಗೂ ಸಿರಿಗಂಧದ ಕಿಟ್‌ಗಳನ್ನು ಕೆಟಿಪಿಪಿ ಅಧಿನಿಯಮ 1999ರ ಕಲಂ 4(ಜಿ)ರಡಿ ವಿನಾಯಿತಿ ಹೊಂದಿರುವ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಬೆಂಗಳೂರು ಇವರಿಂದ ಖರೀದಿಸಲು ಮಂಜೂರಾತಿ ನೀಡಿ ಆದೇಶಿಸಿದ್ದು, KSDL ಸಂಸ್ಥೆಯಿಂದ ಸರಬರಾಜು ಪಡೆಯಲಾಗಿದೆ.<br>ಪ್ರಸ್ತುತ 2026-27ನೇ ಸಾಲಿಗೆ ಇಲಾಖೆಯ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಶುಚಿ ಸಂಭ್ರಮ ಕಿಟ್ ಮತ್ತು ಸಿರಿಗಂಧ ಕಿಟ್‌ಗಳನ್ನು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಬೆಂಗಳೂರು KSDL ಸಂಸ್ಥೆಯ ಮೂಲಕ 4(ಜಿ) ವಿನಾಯಿತಿ ನೀಡಿ ಆದೇಶ ಹೊರಡಿಸಲು ಕ್ರಮವಹಿಸಲಾಗುತ್ತಿದೆ.<br><br>2026-27ನೇ ಸಾಲಿನ ಶೈಕ್ಷಣಿಕ ವರ್ಷ ಪ್ರಾರಂಭವಾಗಿರುವ ಹಿನ್ನೆಲೆಯಲ್ಲಿ 2026-27ನೇ ಸಾಲಿಗೆ KSDL ಸಂಸ್ಥೆಗೆ 4(ಜಿ) ವಿನಾಯಿತಿ ನೀಡಿ ಆದೇಶ ಹೊರಡಿಸುವವರೆಗೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಕಳೆದ ಸಾಲಿನ ದರಗಳಂತೆ ಜಿಲ್ಲೆಗಳ ಬೇಡಿಕೆಯನುಸಾರ ಸರಬರಾಜು ಮಾಡಿ ಪೂರೈಸಲು ಅಗತ್ಯ ಕ್ರಮವಹಿಸುವಂತೆ KSDL ಸಂಸ್ಥೆಗೆ ಸೂಚಿಸಲಾಗಿರುತ್ತದೆ.<br><br>ಅದಾಗ್ಯೂ ಕೆಲವು ಜಿಲ್ಲೆಗಳಲ್ಲಿ KSDL ಸಂಸ್ಥೆಯಿಂದ ಸೋಪ್ ಕಿಟ್‌ಗಳನ್ನು ಸರಬರಾಜು ಮಾಡದೇ ಇರುವುದರಿಂದ ಸೋಪ್ ಕಿಟ್‌ಗಳನ್ನು ಮಾಸಿಕವಾಗಿ ನಿಗಧಿ ಪಡಿಸಲಾಗಿರುವ ದರ (ಬಾಲಕರಿಗೆ ರೂ.171 ಹಾಗೂ ಬಾಲಕಿಯರಿಗೆ ರೂ.230) ಗಳ ಮಿತಿಯೊಳಗೆ ಸ್ಥಳೀಯವಾಗಿ ಖರೀದಿಸಿ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ನಿಗಧಿತ ಅವಧಿಯೊಳಗೆ ಸರಬರಾಜು ಮಾಡಿ ಪೂರೈಸಲು ಅಗತ್ಯಕ್ರಮವಹಿಸುವಂತೆ |

ಎಲ್ಲಾ ಜಿಲ್ಲೆಗಳ ಜಂಟಿ/ಉಪ ನಿರ್ದೇಶಕರುಗಳಿಗೆ ಸೂಚಿಸಿದೆ.

**ಇ)** ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ಕಿಟ್‌ಗಳನ್ನು ನೀಡಲು ಎಷ್ಟು ಮೊತ್ತವನ್ನು ವೆಚ್ಚ ಮಾಡಲಾಗುತ್ತಿದೆ; ಏಪ್ರಿಲ್-2023 ರಿಂದ ಜುಲೈ 2026 ರವರೆಗೆ ಎಷ್ಟು ಮೊತ್ತವನ್ನು ಕಿಟ್ ಗಳಿಗಾಗಿ ವೆಚ್ಚ ಮಾಡಲಾಗಿದೆ;, ಮೊತ್ತವನ್ನು ಯಾರಿಗೆ ಪಾವತಿಸಲಾಗಿದೆ; ಕಿಟ್ನಲ್ಲಿ ಯಾವ ಯಾವ ವಸ್ತುಗಳನ್ನು ಸರಬರಾಜು ಮಾಡಲಾಗುತ್ತದೆ; ಪ್ರತಿ ವಸ್ತುಗಳಿಗನುಗುಣವಾಗಿ ದರಗಳ ಪ್ರತ್ಯೇಕ ಮಾಹಿತಿ ನೀಡುವುದು;

ಪ್ರತಿ ವಿದ್ಯಾರ್ಥಿಗೆ ಪ್ರತಿ ಮಾಹೆಗೆ ಬಾಲಕರಿಗೆ ನಿರ್ಮಲ ಕಿಟ್ ರೂ.150/- ಗಳಂತೆ ಹಾಗೂ ಬಾಲಕಿಯರಿಗೆ ಸ್ಫೂರ್ತಿ ಕಿಟ್ ರೂ.193/-ಗಳಂತೆ ವೆಚ್ಚಗಳನ್ನು ಭರಿಸಲಾಗುತ್ತಿದೆ. ಪ್ರತಿ ಶೈಕ್ಷಣಿಕ ವರ್ಷದಲ್ಲಿ ಪ್ರತಿ ಬಾಲಕರಿಗೆ 10 ಮಾಹೆಗಳಿಗೆ ನಿರ್ಮಲ್ ಕಿಟ್ ಗಳನ್ನು ಹಾಗೂ ಪ್ರತಿ ಬಾಲಕಿಯರಿಗೆ 10 ಮಾಹೆಗಳಿಗೆ ಸ್ಫೂರ್ತಿ ಕಿಟ್‌ಗಳನ್ನು ಪೂರೈಸಲಾಗುತ್ತಿದೆ.

ಪ್ರತಿ ಕಿಟ್‌ನಲ್ಲಿ ಲಭ್ಯವಿರುವ ವಸ್ತುಗಳು ಹಾಗೂ ಅದಕ್ಕೆ ತಗಲುವ ವೆಚ್ಚದ ವಿವರ ಈ ಕೆಳಕಂಡಂತಿದೆ.

| ಕ್ರ. ಸಂ. | ನಿರ್ಮಲ ಕಿಟ್ (ಬಾಲಕರಿಗೆ ವಸ್ತುಗಳು) | ಪ್ರಮಾಣ | ಸರಬರಾಜು ದರ (ರೂ.ಗಳಲ್ಲಿ) |
|---|---|---|---|
| 1 | ಮೈಸೂರ್ ಸ್ಯಾಂಡಲ್ ಸೋಪ್ 125 ಗ್ರಾಂ | 1 | 54.00 |
| 2 | ಮೈಸೂರ್ ಸ್ಯಾಂಡಲ್ ಡಿಟರ್ಜೆಂಟ್ ಕೇಕ್ 150 ಗ್ರಾಂX 2 | 2 | 21.00 |
| 3 | ಮೈಸೂರ್ ಸ್ಯಾಂಡಲ್ ಕೊಬ್ಬರಿ ಎಣ್ಣೆ 100 ಎಮ್. ಎಲ್. | 1 | 50.00 |
| 4 | ಟೂತ್ ಪೇಸ್ಟ್ 100 ಗ್ರಾಂ ಮತ್ತು ಟೂತ್ ಬ್ರಷ್ | 1 | 25.00 |
| 5 | ಪ್ರತಿ ಮೂರು ತಿಂಗಳಿಗೊಮ್ಮೆ 1 ಉತ್ತಮ ಗುಣಮಟ್ಟದ ಟೂತ್ ಬ್ರಷ್ ಉಚಿತ | - | - |
| | ಒಟ್ಟು | 5 | 150.00 |

| ಕ್ರ. ಸಂ. | ಸ್ಫೂರ್ತಿ ಕಿಟ್ (ಬಾಲಕಿಯರಿಗೆ ವಸ್ತುಗಳು) | ಪ್ರಮಾಣ | ಸರಬರಾಜು ದರ (ರೂ.ಗಳಲ್ಲಿ) |
|---|---|---|---|
| 1 | ಮೈಸೂರ್ ಸ್ಯಾಂಡಲ್ ಸೋಪ್ 125 ಗ್ರಾಂ | 1 | 54.00 |
| 2 | ಮೈಸೂರ್ ಸ್ಯಾಂಡಲ್ ಡಿಟರ್ಜೆಂಟ್ ಕೇಕ್ 150 ಗ್ರಾಂX 2 | 2 | 21.00 |
| 3 | ಮೈಸೂರ್ ಸ್ಯಾಂಡಲ್ ಕೊಬ್ಬರಿ ಎಣ್ಣೆ 150 ಎಮ್. ಎಲ್ | 1 | 75.00 |
| 4 | ಮೈಸೂರ್ ಸ್ಯಾಂಡರ್ ಟಾಲ್ಕಂ ಪೌಡರ್ 50 ಗ್ರಾಂ | 1 | 18.00 |
| 5 | ಟೂತ್ ಪೇಸ್ಟ್ 100 ಗ್ರಾಂ | 1 | 25.00 |
| 6 | ಪ್ರತಿ ಮೂರು ತಿಂಗಳಿಗೊಮ್ಮೆ 1 ಉತ್ತಮ ಗುಣಮಟ್ಟದ ಟೂತ್ ಬ್ರಷ್ ಉಚಿತ | - | - |
| | **ಒಟ್ಟು** | **6** | **193.00** |

ಪ್ರತಿ ತಿಂಗಳು 223730 ವಿದ್ಯಾರ್ಥಿಗಳ ಕಿಟ್‌ಗಳಿಗಾಗಿ ರೂ. 3,94,78,450/-ಗಳ ವೆಚ್ಚವನ್ನು ಭರಿಸಲಾಗುತ್ತಿದೆ.

2023-24ನೇ ಸಾಲಿನಲ್ಲಿ ಶುಚಿ ಸಂಭ್ರಮ ಕಿಟ್‌ಗಳನ್ನು ಪೂರೈಕೆ ಮಾಡಲು ರೂ 5,03,98,463/- ಗಳ ವೆಚ್ಚವನ್ನು 2024-25ನೇ ಸಾಲಿನಲ್ಲಿ ರೂ.30,39,31,000/- ಗಳ ವೆಚ್ಚವನ್ನು ಭರಿಸಲಾಗಿರುತ್ತದೆ ಮತ್ತು 2025-26ನೇ ಸಾಲಿನಲ್ಲಿ ರೂ.14,28,87,968/- ಗಳ ವೆಚ್ಚದಲ್ಲಿ ಪೂರೈಕೆ ಮಾಡಲು ಸರಬರಾಜು ಆದೇಶ ನೀಡಲಾಗಿರುತ್ತದೆ.

ಆದೇಶ ಸಂಖ್ಯೆ: ಸಕಇ 44 ಎಂಡಿಎಸ್ 2026, ದಿನಾಂಕ:03.07.2026 ರನ್ವಯ, 2026-27ನೇ ಸಾಲಿಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ 874 ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ನಿರ್ಮಲ ಕಿಟ್ ಹಾಗೂ ಸ್ಪೂರ್ತಿ ಕಿಟ್‌ಗಳನ್ನು ರೂ.39,47,84,500/- (ಮೂವತ್ತೊಂಭತ್ತು ಕೋಟಿ ನಲವತ್ತೇಳು ಲಕ್ಷದ ಎಂಭತ್ತನಾಲ್ಕು ಸಾವಿರದ ಐದು ನೂರು ರೂಪಾಯಿಗಳು ಮಾತ್ರ) ಗಳ ವೆಚ್ಚದಲ್ಲಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಅನ್ವಯ KPPP Portal ಮುಖಾಂತರ ದಿನಾಂಕ:06.07.2026 ರಂದು ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಏಪ್ರಿಲ್ 2023 ರಿಂದ ಜುಲೈ 2026 ರ ವರೆಗೆ ಕೆಟಿಪಿಪಿ ಅಧಿನಿಯಮ 4(ಜಿ) ರಡಿ ವಿನಾಯಿತಿ ಪಡೆದ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಬೆಂಗಳೂರು KSDL ಸಂಸ್ಥೆಗೆ ಜಿಲ್ಲಾ ಪಂಚಾಯತ್ ಲೆಕ್ಕಶೀರ್ಷಿಕೆ:2225-00-101-0-32 ರಡಿ ನಿಗಧಿಪಡಿಸಿದ ಅನುದಾನದಲ್ಲಿ ವೆಚ್ಚಭರಿಸಲಾಗುತ್ತಿದೆ ವಿವರ ಕೆಳಕಂಡಂತಿದೆ.

| ಕ್ರ.ಸಂ | ವರ್ಷ | ವಿದ್ಯಾರ್ಥಿಗಳ ಸಂಖ್ಯೆ | ಮೊತ್ತ |
|---|---|---|---|
| 01 | 2023-24 | 6681 | 62,13,330 |
| 02 | 2024-25 | 6059 | 99,36,760 |
| 03 | 2025-26 | 6694 | 1,14,46,740 |
| 04 | 2026-27 (ಜುಲೈ 2026ರ ವರೆಗೆ) | 2923 | 49,98,330 |

ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಪೂರೈಸಲಾಗುತ್ತಿರುವ ಪ್ರತಿ ಕಿಟ್ ನಲ್ಲಿ ಇರುವ ವಸ್ತುಗಳು ಹಾಗೂ ಸದರಿ ವಸ್ತು ನಿಗದಿಪಡಿಸಲಾದ ದರಗಳನ್ನು ಅನುಬಂಧ - 2 ರಲ್ಲಿ ನೀಡಲಾಗಿದೆ.

**ಈ)** ಸದರಿ ವರ್ಷಗಳಲ್ಲಿ ವಸತಿ ಶಾಲೆಗಳಿಗೆ ಪಠ್ಯಪುಸ್ತಕಗಳನ್ನು ಹಾಗೂ ಇನ್ನಿತರ ವಿದ್ಯಾರ್ಥಿಗಳ ಉಪಯುಕ್ತ ವಸ್ತುಗಳನ್ನು ಸರಿಯಾದ ಸಮಯದಲ್ಲಿ ಸರಬರಾಜು ಮಾಡಲಾಗಿದೆಯೆ;

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಕಾರ್ಯನಿರ್ವಹಿಸುತ್ತಿರುವ ರಾಜ್ಯದ ಎಲ್ಲಾ ವಸತಿ ಶಾಲೆಗಳಿಗೆ ಪಠ್ಯಪುಸ್ತಕಗಳನ್ನು ಸರಬರಾಜು ಮಾಡಲು ಕರ್ನಾಟಕ ಪಠ್ಯಪುಸ್ತಕಗಳ ಸಂಘ(ರಿ), ಬೆಂಗಳೂರು ಇವರಿಗೆ ಬೇಡಿಕೆ ಪತ್ರ (indent) ಸಲ್ಲಿಸಿದ್ದು, ಸದರಿಯವರು ಈಗಾಗಲೇ ಪಠ್ಯಪುಸ್ತಕಗಳನ್ನು ಸರಬರಾಜು ಮಾಡಿದ್ದಾರೆ.

ಆದೇಶ ಸಂಖ್ಯೆ: ಸಕಇ 19 ಎಂಡಿಎಸ್ 2026, ಬೆಂಗಳೂರು ದಿನಾಂಕ: 27.04.2026 ರ ಆದೇಶದನ್ವಯ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಲೇಖಕ್ ಬ್ರ್ಯಾಂಡ್‌ನ ನೋಟ್ ಬುಕ್ ಮತ್ತು ಲೇಖನಾ ಸಾಮಗ್ರಿಗಳನ್ನು ಕರ್ನಾಟಕ ಸಾರ್ವಜನಿಕ

| | | |
|---|---|---|
| | ಮಾಡಿದ್ದಲ್ಲಿ, ದಾಖಲೆಗಳ ಸಮೇತ ಮಾಹಿತಿ ನೀಡುವುದು; ಇಲ್ಲದಿದಲ್ಲಿ, ಯಾವ ಕಾರಣಕ್ಕಾಗಿ ವಿಳಂಬ ಮಾಡಲಾಗುತ್ತಿದೆ; ವಿಳಂಬ ಧೋರಣೆಯಿಂದ ಮಕ್ಕಳ ಶೈಕ್ಷಣಿಕ ಜೀವನಕ್ಕೆ ತೊಂದರೆ ಮಾಡಿದಂತಾಗುವುದಿಲ್ಲವೇ? | ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರನ್ವಯ ನಿಯಮಾನುಸಾರ 4(ಜಿ) ರಡಿ ವಿನಾಯಿತಿ ಹೊಂದಿರುವ ಮೆ\|\|ಎಂ.ಎಸ್.ಐ.ಎಲ್. ಸಂಸ್ಥೆಯಿಂದ ಖರೀದಿಸಿ ಸರಬರಾಜು ಮಾಡಲಾಗುತ್ತಿದೆ.<br><br>ವಿದ್ಯಾರ್ಥಿಗಳಿಗೆ ಅವಶ್ಯವಿರುವ ಸಿದ್ಧಪಡಿಸಿದ ಸಮವಸ್ತ್ರ, ಶೂ, ಸಾಕ್ಸ್, ಟೈ ಮತ್ತು ಬೆಲ್ಟ್‌ಗಳು, ಪಠ್ಯಪುಸ್ತಕಗಳು ಮತ್ತು ನೋಟ್ ಪುಸ್ತಕ ಹಾಗೂ ಲೇಖನ ಸಾಮಗ್ರಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರನ್ವಯ ನಿಯಮಾನುಸಾರ ಖರೀದಿಸಿ ಪೂರೈಸಲಾಗಿತ್ತಿದೆ.<br><br>ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಆದೇಶ ಸಂಖ್ಯೆ:SWD/EDU/ED6/108/2023, C-1083728, ದಿನಾಂಕ:04-10-2023ರನ್ವಯ ಇಲಾಖೆಯ ವಸತಿ ಶಾಲೆಗಳಲ್ಲಿ ದಾಖಲಾಗುವ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಪಠ್ಯಪುಸ್ತಕಗಳನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಿಂದ ಉಚಿತವಾಗಿ ಸರಬರಾಜು ಮಾಡಲು ಆದೇಶಿಸಿದೆ.<br><br>ಪ್ರಸ್ತುತ 67 ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳನ್ನು ವಿತರಿಸಲಾಗಿರುತ್ತದೆ. |

**SWD/290/MDS/2026**

(ಕೆ.ಹೆಚ್.ಮುನಿಯಪ್ಪ)

ಸಮಾಜ ಕಲ್ಯಾಣ ಸಚಿವರು.

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದಪ್ರಶ್ನೆ ಸಂಖ್ಯೆ: 853 ಕ್ಕೆ**

**ಅನುಬಂಧ-1**

| ಕ್ರ.ಸಂ | ಜಿಲ್ಲೆ | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ |
|---|---|---|
| 1 | BAGALKOTE | 8040 |
| 2 | BALLARI | 5790 |
| 3 | BELAGAVI | 14920 |
| 4 | BENGALURU RURAL | 3490 |
| 5 | BENGALURU URBAN | 1480 |
| 6 | BIDAR | 8180 |
| 7 | CHAMARAJANAGARA | 5640 |
| 8 | CHIKKABALLAPURA | 6350 |
| 9 | CHIKKAMAGALURU | 8930 |
| 10 | CHITRADURGA | 8980 |
| 11 | DAKSHINA KANNADA | 3420 |
| 12 | DAVANAGERE | 6220 |
| 13 | DHARWAD | 4280 |
| 14 | GADAG | 4540 |
| 15 | HASSAN | 9930 |
| 16 | HAVERI | 7640 |
| 17 | KALABURAGI | 11380 |
| 18 | KODAGU | 2740 |
| 19 | KOLAR | 6780 |
| 20 | KOPPAL | 7950 |
| 21 | MANDYA | 10290 |
| 22 | MYSURU | 10010 |
| 23 | RAICHUR | 9380 |
| 24 | RAMANAGARA | 6070 |
| 25 | SHIVAMOGGA | 8890 |
| 26 | TUMAKURU | 14460 |
| 27 | UDUPI | 2670 |
| 28 | UTTARA KANNADA | 7090 |
| 29 | VIJAYANAGARA | 6440 |
| 30 | VIJAYAPURA | 6340 |
| 31 | YADGIRI | 5410 |
| **Grand Total** | | **223730** |

ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ.ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) ರವರು ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ: 853(811)ಕ್ಕೆ ಅನುಬಂಧ – 1

| ಕ್ರ.ಸಂ | ಜಿಲ್ಲೆ ಹೆಸರು | ತಾಲ್ಲೂಕು ಹೆಸರು | ಕ್ರ. ಸಂ | ವಸತಿ ಶಾಲೆಗಳ ವಿವರ |
|---|---|---|---|---|
| 1 | ಬೆಂಗಳೂರು ನಗರ | ಬೆಂಗಳೂರು ಉತ್ತರ | 1 | ಸರ್ಕಾರಿ ವಸತಿ ಶಾಲೆ ಯಲಹಂಕ |
| | | ಬೆಂಗಳೂರು ಪೂರ್ವ | 2 | ಸರ್ಕಾರಿ ವಸತಿ ಶಾಲೆ ದೊಡ್ಡಕನ್ನಹಳ್ಳಿ |
| 2 | ಶಿವಮೊಗ್ಗ | ಶಿಕಾರಿಪುರ | 3 | ಸರ್ಕಾರಿ ವಸತಿ ಶಾಲೆ ಮಳವಳ್ಳಿ |
| | | ಶಿಕಾರಿಪುರ | 4 | ಸರ್ಕಾರಿ ವಸತಿ ಶಾಲೆ ಮಂಚಿಕೊಪ್ಪ |
| 3 | ಕೋಲಾರ | ಬಂಗಾರು ಪೇಟೆ | 5 | ಸರ್ಕಾರಿ ವಸತಿ ಶಾಲೆ, ಬಂಗಾರಪೇಟೆ ತಾಲ್ಲೂಕು |
| 4 | ತುಮಕೂರು | ತುಮಕೂರು | 6 | ಸರ್ಕಾರಿ ವಸತಿ ಶಾಲೆ ತುಮಕೂರು ಟೌನ್ |
| | | ಪಾವಗಡ | 7 | ಸರ್ಕಾರಿ ವಸತಿ ಶಾಲೆ ಪಾವಗಡ ಟೌನ್ |
| 5 | ಚಿಕ್ಕಬಳ್ಳಾಪುರ | ಗೌರಿಬಿದನೂರು | 8 | ಸರ್ಕಾರಿ ವಸತಿ ಶಾಲೆ ಗೌರಿಬಿದನೂರು |
| 6 | ಮೈಸೂರು | ಮೈಸೂರು | 9 | ಸರ್ಕಾರಿ ವಸತಿ ಶಾಲೆ ಮೈಸೂರು ಟೌನ್ (ಶಾಂತಿನಗರ ) |
| | | ಮೈಸೂರು | 10 | ಸರ್ಕಾರಿ ವಸತಿ ಶಾಲೆ, ಗಾಂಧಿನಗರ ಮೈಸೂರು ಟೌನ್ |
| 7 | ಚಿಕ್ಕ ಮಗಳೂರು | ತರೀಕೆರೆ | 11 | ಸರ್ಕಾರಿ ವಸತಿ ಶಾಲೆ ಎಂ.ಸಿ ಹಳ್ಳಿ |
| | | ಕಡೂರು | 12 | ಸರ್ಕಾರಿ ವಸತಿ ಶಾಲೆ ಕಡೂರು ಟೌನ್ |
| 8 | ದಕ್ಷಿಣ ಕನ್ನಡ | ಬಂಟ್ವಾಳ | 13 | ಸರ್ಕಾರಿ ವಸತಿ ಶಾಲೆ ಬಂಟ್ವಾಳ |
| 9 | ಹಾಸನ | ಹೊಳೇ ನರಸಿಪುರ | 14 | ಸರ್ಕಾರಿ ವಸತಿ ಶಾಲೆ ಹೊಳೆನರಸೀಪುರ ಟೌನ್ |
| | | ಬೇಲೂರು | 15 | ಸರ್ಕಾರಿ ವಸತಿ ಶಾಲೆ ನರಸೀಪುರ ಭೋವಿ ಕಾಲೋನಿ |
| | | ಚನ್ನರಾಯಪಟ್ಟಣ | 16 | ಸರ್ಕಾರಿ ವಸತಿ ಶಾಲೆ, ಭೂವನ ಹಳ್ಳಿ |
| | | ಅರಸೀಕೆರೆ | 17 | ಸರ್ಕಾರಿ ವಸತಿ ಶಾಲೆ, ಗಂಡಸಿ |
| 10 | ಕೊಡಗು | ಮಡಿಕೇರಿ | 18 | ಸರ್ಕಾರಿ ವಸತಿ ಶಾಲೆ, ಕಾಕಬ್ಬೆ |
| 11 | ಬೆಳಗಾವಿ | ಬೆಳಗಾವಿ | 19 | ಸರ್ಕಾರಿ ವಸತಿ ಶಾಲೆ, ಬಾಳೆಕುಂದ್ರಿಕ್ಯಾಂಪ್, ಬೆಳಗಾವಿ ಟೌನ್ |
| | | ಬೆಳಗಾವಿ | 20 | ಸರ್ಕಾರಿ ವಸತಿ ಶಾಲೆ, ಬೆಳಗಾವಿ ಟೌನ್ |
| | | ರಾಯಭಾಗ್ | 21 | ಸರ್ಕಾರಿ ವಸತಿ ಶಾಲೆ, ಕುಡಚಿ |
| 12 | ವಿಜಯಪುರ | ಇಂಡಿ | 22 | ಸರ್ಕಾರಿ ವಸತಿ ಶಾಲೆ ಹಂಜಗಿ |
| 13 | ಬಾಗಲ ಕೋಟೆ | ಬೀಳಗಿ | 23 | ಸರ್ಕಾರಿ ವಸತಿ ಶಾಲೆ ಕುಂದರಗಿ |
| | | ಮುಧೋಳ | 24 | ಸರ್ಕಾರಿ ವಸತಿ ಶಾಲೆ ಮುಧೋಳ |
| | | ಬಾಗಲಕೋಟೆ | 25 | ಸರ್ಕಾರಿ ವಸತಿ ಶಾಲೆ ನವನಗರ, ಮುಚ್ಚಂಡಿ |
| 14 | ಧಾರವಾಡ | ಧಾರವಾಡ | 26 | ಸರ್ಕಾರಿ ವಸತಿ ಶಾಲೆ, ಧಾರವಾಡ ಟೌನ್ |
| 15 | ಗದಗ | ಗದಗ ಟೌನ್ | 27 | ಸರ್ಕಾರಿ ವಸತಿ ಶಾಲೆ, ಶಿಗ್ಲಿ |
| | | ರೋಣ | 28 | ಸರ್ಕಾರಿ ವಸತಿ ಶಾಲೆ, ಗಜೇಂದ್ರ ಘಡ |
| 16 | ಹಾವೇರಿ | ರಾಣಿ ಬೆನ್ನೂರು | 29 | ಸರ್ಕಾರಿ ವಸತಿ ಶಾಲೆ, ರಾಣಿ ಬೆನ್ನೂರು |
| | | ರಾಣಿ ಬೆನ್ನೂರು | 30 | ಸರ್ಕಾರಿ ವಸತಿ ಶಾಲೆ, ನೂಕಾಪುರ |
| | | ಹಿರೇಕೆರೂರು | 31 | ಸರ್ಕಾರಿ ವಸತಿ ಶಾಲೆ, ಹಿರೆಕೆರೂರು ಟೌನ್ |
| | | ಬ್ಯಾಡಗಿ | 32 | ಸರ್ಕಾರಿ ವಸತಿ ಶಾಲೆ ಬ್ಯಾಡಗಿ ಟೌನ್ |
| | | ಶಿಗ್ಗಾವಿ | 33 | ಸರ್ಕಾರಿ ವಸತಿ ಶಾಲೆ ಶಿಗ್ಗಾವಿ ಟೌನ್ |
| | | ಹಾನಗಲ್ | 34 | ಸರ್ಕಾರಿ ವಸತಿ ಶಾಲೆ ಹಾನಗಲ್ ಟೌನ್ |
| | | ಹಾವೇರಿ | 35 | ಸರ್ಕಾರಿ ವಸತಿ ಶಾಲೆ ಹಾವೇರಿ ಟೌನ್ |
| 17 | ಉತ್ತರ ಕನ್ನಡ | ಸಿದ್ದಪುರ | 36 | ಸರ್ಕಾರಿ ವಸತಿ ಶಾಲೆ ಕೊಂಡ್ಲಿ |
| | | ಹಳಿಯಾಳ | 37 | ಸರ್ಕಾರಿ ವಸತಿ ಶಾಲೆ ಹಳಿಯಾಳ ಟೌನ್ |

| | | | | |
|---|---|---|---|---|
| | | ಸಿರಸಿ | 38 | ಸರ್ಕಾರಿ ವಸತಿ ಶಾಲೆ ಬನವಾಸಿ, ಸಿರಸಿ |
| 18 | ಕಲುಬುರಗಿ | ಕಲುಬುರಗಿ | 39 | ಸರ್ಕಾರಿ ವಸತಿ ಶಾಲೆ ಸಂತ್ರಸ್ತವಾಡಿ |
| | | ಚಿತ್ತಾಪುರ | 40 | ಸರ್ಕಾರಿ ವಸತಿ ಶಾಲೆ ಕಾಳಗಿ |
| | | ಚಿತ್ತಾಪುರ | 41 | ಸರ್ಕಾರಿ ವಸತಿ ಶಾಲೆ, ವಡೇರ ಕಾಲೋನಿ, ಶಹಾಬಾದ್ ಟೌನ್ |
| | | ಸೇಡಂ | 42 | ಸರ್ಕಾರಿ ವಸತಿ ಶಾಲೆ, ಮಲಖೇಡ್ ಸ್ಟೇಷನ್ |
| | | ಅಫಜಲ್ ಪುರ | 43 | ಸರ್ಕಾರಿ ವಸತಿ ಶಾಲೆ, ಅಫಜಲ್ ಪುರ |
| | | ಚಿತ್ತಾಪುರ | 44 | ಸರ್ಕಾರಿ ವಸತಿ ಶಾಲೆ ಬಂಕೂರ |
| 18 | ಕಲುಬುರಗಿ | ಚಿಂಚೋಳಿ | 45 | ಸರ್ಕಾರಿ ವಸತಿ ಶಾಲೆ ಚಿಂಚೋಳಿ ಟೌನ್ |
| | | ಚಿಂಚೋಳಿ | 46 | ಸರ್ಕಾರಿ ವಸತಿ ಶಾಲೆ ಪಾಲಾತ್ಯ ತಾಂಡಾ |
| | | ಚಿಂಚೋಳಿ | 47 | ಸರ್ಕಾರಿ ವಸತಿ ಶಾಲೆ ಒಂಟಿ ಚಿಂತಾ ತಾಂಡಾ |
| | | ಆಳಂದ | 48 | ಸರ್ಕಾರಿ ವಸತಿ ಶಾಲೆ ಕೋರಹಳ್ಳಿ ತಾಂಡಾ |
| | | ಅಫಜಲ್ ಪುರ | 49 | ಸರ್ಕಾರಿ ವಸತಿ ಶಾಲೆ ಅರ್ಜುಣಗಿ ತಾಂಡಾ |
| 19 | ಯಾದಗಿರಿ | ಯಾದಗಿರಿ | 50 | ಸರ್ಕಾರಿ ವಸತಿ ಶಾಲೆ ಬೋರಬಂಡಾ |
| | | ಯಾದಗಿರಿ | 51 | ಸರ್ಕಾರಿ ವಸತಿ ಶಾಲೆ ಆಲೀಪುರ |
| 20 | ರಾಯಚೂರು | ರಾಯಚೂರು | 52 | ಸರ್ಕಾರಿ ವಸತಿ ಶಾಲೆ ರಾಯಚೂರು ಟೌನ್ |
| | | ರಾಯಚೂರು | 53 | ಸರ್ಕಾರಿ ವಸತಿ ಶಾಲೆ, ಖಾನಾಪುರ- ಉಡಮಗಲ್ |
| | | ಲಿಂಗಸಗೂರು | 54 | ಸರ್ಕಾರಿ ವಸತಿ ಶಾಲೆ, ಆಡಬಾವಿ ತಾಂಡಾ |
| | | ಲಿಂಗಸಗೂರು | 55 | ಸರ್ಕಾರಿ ವಸತಿ ಶಾಲೆ, ಆಶೀಹಾಳ ತಾಂಡಾ |
| | | ಲಿಂಗಸಗೂರು | 56 | ಸರ್ಕಾರಿ ವಸತಿ ಶಾಲೆ, ಮಾರಲ ದಿನ್ನಿ ತಾಂಡಾ |
| | | ದೇವದುರ್ಗ | 57 | ಸರ್ಕಾರಿ ವಸತಿ ಶಾಲೆ, ಬಂಡೇಗುಡ್ಡ |
| | | ದೇವದುರ್ಗ | 58 | ಸರ್ಕಾರಿ ವಸತಿ ಶಾಲೆ, ದೇವದುರ್ಗ ಟೌನ್ |
| 21 | ಕೊಪ್ಪಳ | ಗಂಗಾವತಿ | 59 | ಸರ್ಕಾರಿ ವಸತಿ ಶಾಲೆ, ನವಲಿ ತಾಂಡಾ |
| 22 | ಬಳ್ಳಾರಿ | ಬಳ್ಳಾರಿ | 60 | ಸರ್ಕಾರಿ ವಸತಿ ಶಾಲೆ ಬಳ್ಳಾರಿ ಟೌನ್ |
| 23 | ವಿಜಯ ನಗರ | ಹರಪ್ಪನಹಳ್ಳಿ | 61 | ಸರ್ಕಾರಿ ವಸತಿ ಶಾಲೆ ಹರಪ್ಪನ ಹಳ್ಳಿ |
| 24 | ಬೀದರ್ | ಬೀದರ್ | 62 | ಸರ್ಕಾರಿ ವಸತಿ ಶಾಲೆ, ಸಂಗೊಳಗಿ ತಾಂಡಾ |
| | | ಬಸವ ಕಲ್ಯಾಣ | 63 | ಸರ್ಕಾರಿ ವಸತಿ ಶಾಲೆ, ಏಕಲೂರು ತಾಂಡಾ |
| | | ಬಸವ ಕಲ್ಯಾಣ | 64 | ಸರ್ಕಾರಿ ವಸತಿ ಶಾಲೆ, ಕಲಕೋರ ತಾಂಡಾ |
| | | ಬಸವ ಕಲ್ಯಾಣ | 65 | ಸರ್ಕಾರಿ ವಸತಿ ಶಾಲೆ. ಹಾರಕೂಡ ತಾಂಡಾ |
| | | ಔರಾದ | 66 | ಸರ್ಕಾರಿ ವಸತಿ ಶಾಲೆ ಚಿಕ್ಲಿ(ಯು) ತಾಂಡಾ |
| | | | 67 | ಸರ್ಕಾರಿ ವಸತಿ ಶಾಲೆ ನಿಲ್ಮನಹಳ್ಳಿ ತಾಂಡಾ |

**ಮಾನ್ಯವಿಧಾನಪರಿಷತ್ತುಸದಸ್ಯರಾದಶ್ರೀ.ಛಲವಾದಿಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದಚುನಾಯಿತರಾದವರು) ರವರುಚುಕ್ಕೆಗುರುತಿಲ್ಲದಪ್ರಶ್ನೆಸಂಖ್ಯೆ: 853(811)ಕ್ಕೆಅನುಬಂಧ – 2**

| ಕ್ರ.ಸಂ | ವಿವರ | ಉತ್ಪನ್ನಗಳವಿವರ | 2023-24 | | 2024-25 | | 2025-26 | |
|---|---|---|---|---|---|---|---|---|
| | | | ಪ್ರಮಾಣ | ದರ (ರೂ) | ಪ್ರಮಾಣ | ದರ (ರೂ) | ಪ್ರಮಾಣ | ದರ (ರೂ) |
| 01 | ಶುಚಿಸಂಭ್ರಮ ಕಿಟ್(ಬಾಲಕರು) | ಮೈಸೂರುಸ್ಯಾಂಡಲ್ಸೋಪ್ -75 ಗ್ರಾಂ | 1 | 39.00 | 2 | 78.00 | 2 | 78.00 |
| 02 | | ಮೈಸೂರುಸ್ಯಾಂಡಲ್ಡಿಟರ್ಜೆಂಟ್ ಕೇಕ್- | 2 | 20.00 | 2 | 20.00 | 2 | 20.00 |
| 03 | | ಮೈಸೂರುಸ್ಯಾಂಡಲ್ಕೊಬ್ಬರಿ ಎಣ್ಣೆ-50 | 1 | 19.00 | 1 | 18.00 | 1 | 25.00 |
| 04 | | ಮೈಸೂರುಸ್ಯಾಂಡಲ್ಟ್ಯಾಲ್ಕಂಪೌಡರ್-50ಗ್ರಾ | 0 | 0 | 1 | 18.00 | 1 | 18.00 |
| 05 | | ಟೂತ್ ಪೇಸ್ಟ್-50 ಗ್ರಾಂ | 1 | 15.00 | 2 | 30.00 | 2 | 30.00 |
| | | ಒಟ್ಟುಮೊತ್ತ:- | | 93.00 | | 164.00 | | 171.00 |

| ಕ್ರ.ಸಂ | ವಿವರ | ಉತ್ಪನ್ನಗಳವಿವರ | 2023-24 | | 2024-25 | | 2025-26 | |
|---|---|---|---|---|---|---|---|---|
| | | | ಪ್ರಮಾಣ | ದರ (ರೂ) | ಪ್ರಮಾಣ | ದರ (ರೂ) | ಪ್ರಮಾಣ | ದರ (ರೂ) |
| 01 | ಸಿರಿಗಂಧಕಿಟ್ (ಬಾಲಕಿಯರಿಗೆ) | ಮೈಸೂರುಸ್ಯಾಂಡಲ್ ಸೋಪ್-75ಗ್ರಾಂ | 1 | 39.00 | 2 | 78.00 | 2 | 78.00 |
| 02 | | ಮೈಸೂರುಸ್ಯಾಂಡಲ್ಡಿಟರ್ಜೆಂಟ್ ಕೇಕ್- | 2 | 20.00 | 3 | 30.00 | 3 | 30.00 |
| 03 | | ಮೈಸೂರುಸ್ಯಾಂಡಲ್ಕೊಬ್ಬರಿ ಎಣ್ಣೆ-150 | 1 | 39.00 | 1 | 40.00 | 1 (150ML) | 74.00 |
| 04 | | ಮೈಸೂರುಸ್ಯಾಂಡಲ್ಟ್ಯಾಲ್ಕಂ ಪೌಡರ್-50 | 1 | 21.00 | 1 | 18.00 | 1 | 18.00 |
| 05 | | ಟೂತ್ ಪೇಸ್ಟ್-50 ಗ್ರಾಂ | 1 | 15.00 | 2 | 30.00 | 2 | 30.00 |
| | | ಒಟ್ಟುಮೊತ್ತ:- | | 134.00 | | 196.00 | | 230.00 |